ಡೆಕ್ಕನ್' ವಿಮಾನ ಸಂಸ್ಥೆಯನ್ನು ಸ್ಥಾಪಿಸಿದಾಗ, ಕಂಪ್ಯೂಟರ್ ಜನರೇಟೆಡ್ ಟಿಕೆಟ್... ಅಂದರೆ ಯಾವುದೇ ಕಾಗದದಲ್ಲಿ ಮುದ್ರಿಸಬಹುದಾದ — ಚೆಕ್ ಬುಕ್ಕಿನಂತೆ ಕಾಣದಿರುವ — ಟಿಕೆಟುಗಳನ್ನು ಮಾರಿದರು. ಆ ಟಿಕೆಟಿನ ಮೇಲೆ ಮುದ್ರೆಯಿಲ್ಲ. ಈ ಬದಲಾವಣೆ ರೈಲಿನ ಯಾನಕ್ಕೂ ವರ್ತಿಸಿತು. ಆದರೆ ಅಲ್ಲಿ ತಾರೀಖಿನ ಯಂತ್ರ ಇಲ್ಲವಾಯಿತಾದರೂ, ಗೋಪೀನಾಥರ 'ಸಿಂಪ್ಲಿ ಪ್ಲೈ'ಯ ಆಕ್ರಮಣವನ್ನು ಮಾತ್ರ ಈ ಭದ್ರತಾ ತಪಾಸಣೆಯ ಸೀಲು ಎದುರಿಸಿ ನಿಂತಿತ್ತು. ಈಚೆಗೆ ಅದನ್ನು ಒಂದು ವಾರಕಾಲ ಪ್ರಾಯೋಗಿಕವಾಗಿ ತೆಗೆದು ಹಾಕಿದ್ದರೂ ವಾಪಸ್ಸಾಗಿದ್ದ ಈ ಮುದ್ರೆ ಈಗ ನಿಜಕ್ಕೂ ನಾಪತ್ತೆಯಾಗುತ್ತಿದೆ. ಅದು ಕಳವಳದ ಮಾತೇ. ಬಸ್ಸಿಗಿಲ್ಲದ, ರೈಲಿಗಿಲ್ಲದ ಘನತೆ ಅಷ್ಟೇನೂ ಭಾರವಲ್ಲದ ಈ ಚೌಕ ಸೀಲಿನಲ್ಲಿತ್ತು. ಅದೇ ಇಲ್ಲವೆಂದರೆ ಭದ್ರತಾ ತಪಾಸಣೆಯ ಪರೀಕ್ಷೆ ಪಾಸಾಗಿರುವುದಕ್ಕೆ ಪ್ರಮಾಣಪತ್ರವೇ ಇಲ್ಲದಂತಾಗುತ್ತದೆ. ಪಾಪ ಅಲ್ಲಿದ್ದ ಸಿಬ್ಬಂದಿಗಿದ್ದ ಒಂದೇ ಅಧಿಕಾರವನ್ನು ವಿಮಾನಾಶ್ರಯ ಇಲ್ಲವಾಗಿಸಿತೇ...

ವಿಮಾನಯಾನದಲ್ಲಿ ಇದ್ದದ್ದು ಒಂದೇ ಮುದ್ರೆಯಲ್ಲ. ವಿದೇಶಯಾತ್ರೆ ಹೋಗುವುದಿದ್ದರೂ ಅಲ್ಲಿ ಅಧಿಕಾರಪ್ರಯೋಗದ ಆರ್ಭಟ ಕಾಣಿಸುತ್ತಲೇ ಇತ್ತು. ದೇಶದಿಂದ ಹೊರಹೋಗುವಾಗ ಒಮ್ಮೆ ಒಳಬರುವಾಗ ಇನ್ನೊಮ್ಮೆ ಯಾವ ಪುಟವೆಂದರಲ್ಲಿ ತೆಗೆದು ಮುದ್ರೆ ಒತ್ತಿದ್ದೇ ಒತ್ತಿದ್ದು. ಪುಟಗಳು ಖರ್ಚಾದಷ್ಟೂ, ಹೆಚ್ಚಿನ ಮುದ್ರೆಗಳನ್ನು ಶೇಖರಿಸಿದಷ್ಟೂ ಹೆಚ್ಚಿನ ವಿದೇಶಯಾನ ಮಾಡಿದ ಘನತೆ ನಮಗಿರುತ್ತಿತ್ತು.

ಏನೇ ಆಗಲಿ ಮುದ್ರೆಯ ಅಧಿಕಾರದ ಗತ್ತು ನಿಜಕ್ಕೂ ಕಾಣಬೇಕೆಂದರೆ ಅದು ನಿರಂತರವಾಗಿ ಸಿಗುವುದು ಒಂದೇ ಜಾಗದಲ್ಲಿ. ನಮ್ಮ ಟಪಾಲಾಫೀಸಿನಲ್ಲಿ. ಅಲ್ಲಿನ ಮುದ್ರೆಗೆ ಯಾವುದೇ ಆಧುನಿಕತೆಯ ಅಥವಾ ತಂತ್ರಜ್ಞಾನದ ಸೋಂಕೂ ಹತ್ತಿಲ್ಲ. ಹಾಗೂ ಅಲ್ಲಿ ನಮಗೆ ಕಾಣಸಿಗುವುದು ಅಧಿಕಾರದ ಗತ್ತಿನ ಉತ್ತುಂಗದಲ್ಲಿರುವ ಗುಂಡು ಮುದ್ರೆ. ನೀವು ನಿಮ್ಮ ಉಳಿತಾಯ ಖಾತೆಯಲ್ಲಿ ಹಣ ಜಮಾ ಮಾಡಿ, ರಿಜಿಸ್ಟರ್ಡ್ ಪೋಸ್ಟ್ ಮಾಡಿ, ಎನ್ನೆಸ್ಸಿ ಬೇಕೆಂದು ಅರ್ಜಿ ನೀಡಿ. ಏನೇ ಮಾಡಿ. ಅಲ್ಲಿ ಮೊದಲಿಗೆ ಉದ್ದ ಗೂಟದಂತಿರುವ ಮುದ್ರೆಯನ್ನೆತ್ತಿ, ಕಾಗದವನ್ನು ಪಾಕಿಸ್ತಾನ ರಾಷ್ಟ್ರವೆಂದು ಊಹಿಸಿ, ಕಾಗದದ ಇಬ್ಭಾಗದಲ್ಲೂ ಆ ಆಕ್ರಮಣದ ಗುರುತು ಕಾಣುವಂತೆ ಮುದ್ರೆಯೊತ್ತುತ್ತಾರೆ. ಅದಿಲ್ಲದಿದ್ದರೆ ಏನು ಸಾಧಿಸಿದಂತೆ? ಸದ್ಯ ಅಲ್ಲಂತೂ ಇದು ಸದಾಬಹಾರ್ ಆಗಿ ಉಳಿದಿದೆ. ಅಕಸ್ಮಾತ್ ಅಂಚೆ ಕಚೇರಿಯಲ್ಲೇನಾದರೂ ಮುದ್ರೆಯ ಘನತೆ ಇಲ್ಲವಾದರೆ ಏನು ಗತಿ? ನಾವು ಹೋಗುವುದಾದರೂ ಎಲ್ಲಿಗೆ... ಶಿವಶಿವಾ...

ಹೀಗೆಂದುಕೊಳ್ಳುತ್ತಿರುವಾಗಲೇ ನನಗೆ ಮತ್ತೊಂದು ಅನುಭವವಾಯಿತು. ಒಳ ಉಡುಪುಗಳನ್ನು ಮಾರಾಟ ಮಾಡುವ ಒಂದು ಪುಟ್ಟ ಗೂಡಂಗಡಿಯಲ್ಲಿ ವ್ಯಾಪಾರ ಮಾಡಿದೆ. 'ಕಾರ್ಡು ತೆಗೆದುಕೊಳ್ಳುತ್ತೀರಾ?' ಎಂದು ಕೇಳಿ ನಮ್ಮ ಪ್ರಧಾನಿಯವರ ಕ್ಯಾಶ್‌ಲೆಸ್ ಅರ್ಥವ್ಯವಸ್ಥೆಗೂ ನನ್ನ ಅಳಿಲ ಸೇವೆಯನ್ನರ್ಪಿಸಿದೆ. ಆತ ಅದನ್ನೂ ಸ್ವೀಕರಿಸಿದ. ಕಂಪ್ಯೂಟರಿನಿಂದ ಜಿಎಸ್‌ಟಿ ಸಮೇತ ಒಂದು ಚೀಟಿಯನ್ನೂ ಪ್ರಿಂಟ್ ಮಾಡಿ ನೀಡಿದ. ಇನ್ನೇನು ಅದನ್ನು ಇಸಿದು ನಾನು ಹೊರಡಬೇಕು ಎನ್ನುವಷ್ಟರಲ್ಲಿ, "ಸರ್, ಇಲ್ಲಿ ಬನ್ನಿ, ಆ ಚೀಟಿ ಕೊಡಿ" ಎಂದ.

ಕೊಟ್ಟೆ. ಅದರ ಮೇಲೆ, ಒಂದರ ನಂತರ ಒಂದು ಮೂರು ಮುದ್ರೆಗಳನ್ನು ಒತ್ತಿದ. ಕ್ಯಾಷ್ ರಿಸೀವ್ಡ್ ಅನ್ನುವ ಮುದ್ರೆ. ಅದಕ್ಕೆ ಕಾಟು ಹಾಕಿ ಕಾರ್ಡ್ ಪೇಮೆಂಟ್ ಎಂದು ಬರೆದ. ಎರಡನೇ ಮುದ್ರೆ ಚೆಕ್ಡ್ ಅಂತ ಇತ್ತು. ಮೂರನೆಯದು ಡೆಲಿವರ್ಡ್ ಅಂತ. ಅಷ್ಟು ಸಣ್ಣ ಒಬ್ಬೊಂಟಿಗನ ಅಂಗಡಿಯಲ್ಲಿ ಇಷ್ಟು ಮುದ್ರೆಗಳನ್ನು ನೋಡಿ ನನಗೆ ನಮ್ಮ ದೇಶದ ಭೂತದ ಬಗ್ಗೆ ವಿಪರೀತ